


‘ಡೆಸ್ಟಿನಿ’ ಚಿತ್ರದ ಒಂದು ಮನಕಲಕುವ ದೃಶ್ಯ

ಭಾವಗಳಿಗೆ ನ್ಯಾಯ ಸಲ್ಲಿಸುವಂತಿವೆ. ಪಾತ್ರಗಳಲ್ಲಿ ಬಹುಪಾಲು ಒಳ್ಳೆಯತನವೇ ಕಾಣುವುದು ಈ ಕಾಲಮಾನದಲ್ಲಿ ಅಪರೂಪವೇ ಹೌದು.

‘ಡೆಸ್ಟಿನಿ’ ಚಿತ್ರಕ್ಕೆ ಮನರಂಜನೆಯ ಕಿಂಚಿತ್ ಉದ್ದೇಶವೂ ಇಲ್ಲ. ಅದು ಕುಟುಂಬವೊಂದರ ಕಟು ಹೋರಾಟದ ಬಿಂಬ. ಚೀನಾದ ಅಕಾಡೆಮಿ ಆಫ್ ಸೋಷಿಯಲ್ ಸೈನ್ಸಸ್ ಅಂದಾಜು ಮಾಡಿರುವಂತೆ ಆ ದೇಶದಲ್ಲಿ ‘ಆಟಿಸಂ’ ಸಮಸ್ಯೆ ಎದುರಿಸುತ್ತಿರುವ ಒಂದು ಕೋಟಿ ಜನರಿದ್ದಾರೆ. ಅವರಲ್ಲಿ ಶೇ 20ರಷ್ಟು 14 ವಯಸ್ಸಿಗಿಂತ ಕಡಿಮೆಯವರು. ಅಮೆರಿಕದಲ್ಲಿ ಈ ಸಮಸ್ಯೆ ಇರುವ ಮಕ್ಕಳ ಶಿಕ್ಷಣಕ್ಕೆ ಸರ್ಕಾರವೇ ನೆರವು ನೀಡುತ್ತದೆ. ಆದರೆ, ಚೀನಾದಲ್ಲಿ ಪರಿಸ್ಥಿತಿ ಹಾಗಿಲ್ಲ. ಇದನ್ನು ಝಾಂಗ್ ವೀ ಸೂಕ್ಷ್ಮವಾಗಿ ಗಮನಿಸಿಯೇ ಈ ಸಿನಿಮಾ ಮಾಡಿದ್ದಾರೆ.

‘ಡೆಸ್ಟಿನಿ’ ಎಂದರೆ ವಿಧಿಲಿಖಿತ, ಹಣೆಬರಹ. ಮಹಾತಾಯಿಯೊಬ್ಬಳು ತನ್ನ ಹಾಗೂ ತನ್ನ ಮಗುವಿನ ‘ಹಣೆಬರಹವನ್ನು’ ತಿದ್ದಲು ಹೊರಡುವ ಸಂವೇದನಾ ಸೂಕ್ಷ್ಮವೊಂದು ಇಡೀ ಚಿತ್ರದಲ್ಲಿ ಪ್ರವಹಿಸುತ್ತದೆ. ಸಂಯಮದ ಕಥಾನಕದಲ್ಲಿ ಕಾಡುವ ಹಲವು ಅಂಶಗಳಿವೆ. ಉಸಿರು ಬಿಗಿಹಿಡಿದು ನೋಡಿಸಿಕೊಳ್ಳುವ ಕೆಲವು ಸನ್ನಿವೇಶಗಳು ಕಣ್ಣಾಲಿಯಲ್ಲಿ ನೀರನ್ನೂ ತರುತ್ತವೆ. ಸಿನಿಮಾ ಮನದಲ್ಲಿ ಉಳಿಯಬೇಕಿರುವುದು ಹೀಗೆಯೇ.